


ಗಿಳಿ ಕೋಗಿಲೆ ಹಂಸ ನವಿಲಂಥ ಇನಿದನಿಯ ಹಕ್ಕಿಗಳೂ

ದಾರುಣ ದನಿಯಲ್ಲಿ ಚೀರುತ್ತಿವೆ

ಈಟಿಯಂಥ ಕೊಂಡಿಯುಳ್ಳ ಮಿಡತೆಗಳು ಕುದುರೆಗಳ ಬೆನ್ನೇರಿ

ರಕ್ತ ಹೀರಿಕೊಳ್ಳುತ್ತಾ ಸದ್ದು ಮಾಡುತ್ತಿವೆ

ಅರುಂಧತಿ, ಮೂರು ಲೋಕದಲ್ಲೂ ಸಾಧ್ವಿ ಎನಿಸಿಕೊಂಡವಳು ವಸಿಷ್ಠನನ್ನು ಹಿಂದೆ ತಳ್ಳುವ ಹಾಗೆ ಕಾಣುತ್ತಿದ್ದಾಳೆ. ಸೋಕದಿದ್ದರೂ ನಗಾರಿ ತನ್ನಷ್ಟಕ್ಕೆ ಬಡಿದುಕೊಳ್ಳುತ್ತಿದೆ.

ಕುದುರೆ ಹೂಡದಿದ್ದರೂ ರಥಗಳು ತಮ್ಮಷ್ಟಕ್ಕೇ ಓಡುತ್ತಿವೆ

ಮೋಡವೇ ಇಲ್ಲ, ಆದರೆ ಭಯಂಕರ ಗುಡುಗು

ವಾಹನಗಳು ಕಂಬನಿ ಸುರಿಸಿಕೊಂಡು ನಿಂತಿವೆ

ಜನ ಇರಲಿ, ಪ್ರತಿಮೆಗಳೂ ಕಾಲಚೋದಿತವಾಗಿ ಶಸ್ತ್ರಾಸ್ತ್ರ ಹಿಡಿದುಕೊಂಡು ಒಂದನ್ನೊಂದು ಹೊಡೆಯುತ್ತಿವೆ. ಮಕ್ಕಳು ಕೈಯಲ್ಲಿ ದೊಣ್ಣೆ ಹಿಡಿದುಕೊಂಡು ಓಡಾಡುತ್ತಿವೆ.

ಮಗುವೊಂದು ಕಟ್ಟಿದ ಆಟದ ಪಟ್ಟಣವನ್ನು ಇನ್ನೊಂದು ಮಗು ಹೊಡೆದು ಹಾಕುತ್ತಿದೆ

ಕುದುರೆಗಳು ದೀನ ಮುಖ ಮಾಡಿಕೊಂಡಿವೆ. ಆನೆಗಳ ಮೈಯಲ್ಲಿ ನೀರೇ ಆಡುತ್ತಿಲ್ಲ

ಬೆಳಗಾಗುವುದೇ ತಡ ಸಾವಿರಾರು ರಾಜರ ರಕ್ತವನ್ನು ಭೂಮಿ ಕುಡಿಯೋದು ನಿಶ್ಚಿತ ಎಂದು ಋಷಿಮುನಿಗಳೇ ಮಾತಾಡಿಕೊಳ್ಳುತ್ತಿದ್ದಾರೆ. ಈ ಕುತ್ತಿಗೆಗೆ ಬಂದಿರುವ ಪ್ರಾಪ್ತ ಕಾಲದಿಂದ ಲೋಕವನ್ನು ಬಿಡಿಸಿಕೊಳ್ಳುವ ಯೋಚನೆ ಮಾಡು

**ಧೃತರಾಷ್ಟ್ರ:** ಅಪ್ಪಾಜಿ,

ಆಗಲೇಬೇಕು ಎಂದು ಮೊದಲೇ ನಿರ್ಣಯ ಆಗಿದೆ, ನನ್ನ ಕೈಲೇನಿದೆ

ಇವರು ಯುದ್ಧದಲ್ಲಿ ಸತ್ತರೆ ಏನಂತೆ?

ವೀರಸ್ವರ್ಗ ಪಡೆದುಕೊಂಡು ಕೇವಲ ಸುಖದಲ್ಲೇ ಇರುತ್ತಾರೆ ಬಿಡು

ಇಲ್ಲಿ ಕೀರ್ತಿ, ಅಲ್ಲಿ ದೀರ್ಘಕಾಲದ ಸುಖ, ಇನ್ನೇನು ಬೇಕು?

ಇದನ್ನು ಕೇಳಿ ಕವೀಂದ್ರ ವ್ಯಾಸ ಒಂದು ಗಳಿಗೆ ತನ್ನೊಳಗೇ ಯೋಚನೇಲಿ ಬಿದ್ದು ಆಮೇಲೆ ಹೇಳಿದ:

ವ್ಯಾಸ: ನಿನ್ನ ಮಾತು ನಿಜ. ಕಾಲವೇ ಎಲ್ಲವನ್ನೂ ಬತ್ತಿಸುತ್ತದೆ. ಮತ್ತೆ ಅದೇ

ಹುಟ್ಟಿಸುತ್ತದೆ. ನಿಜ. ಇಲ್ಲಿ ಯಾವುದೂ ಶಾಶ್ವತ ಅಲ್ಲ

ಆದರೆ ಆ ಕಾಲ ಅನ್ನುವುದು ಈಗ ನಿನ್ನ ಮಗನಾಗಿ ಹುಟ್ಟಿದೆಯಲ್ಲಪ್ಪಾ!

ನಿನ್ನ ಮಕ್ಕಳು, ದಾಯಾದಿಗಳು, ಗೆಳೆಯರು, ನಂಟರು ಇವರೆಲ್ಲರ ಕೊಲೆಯನ್ನು ತಪ್ಪಿಸುವುದಕ್ಕೆ ನಿನ್ನ ಕೈಲೆ ಆಗುತ್ತದೆ.

ನೋಡು, ನನಗೆ ಅಪ್ರಿಯವಾದದ್ದನ್ನ ಮಾಡಬೇಡ.

ದಾಯಾದಿಗಳ ಕೊಲೆ ಎನ್ನುವುದು ನೀಚ ಕೆಲಸ

ಯಾವ ವೇದವೂ ಅದನ್ನ ಬೆಂಬಲಿಸುವುದಿಲ್ಲ. ಯಾರಿಗೂ ಅದು ಹಿತವೂ ಅಲ್ಲ.

ಕುಲಧರ್ಮ ಅನ್ನುವುದು ನಿನಗೆ ಇನ್ನೊಂದು ಮೈಯಿ ಅಂತ ತಿಳಿ.

ಅದನ್ನು ಕೊಂದರೆ ನಿನ್ನನ್ನ ಕೊಂದುಕೊಂಡ ಹಾಗೇನೇ

ಈ ಆಪತ್ತನ್ನು ನೀನು ತಪ್ಪಿಸಬಹುದು

ಆದರೂ ದಾರಿ ಬಿಟ್ಟು ಹೋಗುತ್ತಿದ್ದೀಯಾ

ನೋಡು, ಧರ್ಮದ ಕೈ ಬಿಡಬೇಡ. ನಿನ್ನ ಮಕ್ಕಳಿಗೆ ಧರ್ಮವನ್ನು ಕಾಣಿಸು.

ಈ ಸೂತಕ ಅಂಟಿಸುವ ರಾಜ್ಯ ಯಾಕೆ ನಿನಗೆ

ಧೃತರಾಷ್ಟ್ರನು ಅಂಬಿಕೆಯ ಮಗ ವಿಪ್ರೇಂದ್ರನ ಮಾತೆಲ್ಲ ಕೇಳಿಸಿಕೊಂಡ. ರಾಜ ಮಾತು ಬಲ್ಲವನು. ಅವನೂ ಮಾತಾಡಿದ:

**ಧೃತರಾಷ್ಟ್ರ:** 'ನನಗೆ ಗೊತ್ತಿರುವುದನ್ನೇ ಹೇಳುತ್ತಿದ್ದೀಯಾ

ಇರುವುದು ಇಲ್ಲದೆ ಇರುವುದು ಎಲ್ಲದರ ಯಥಾರ್ಥವನ್ನೂ ತಿಳಿದಿದೇನೆ

ಆದರೆ ಲೋಕದಲ್ಲಿದ್ದ ಮೇಲೆ ಸ್ವಾರ್ಥದ ಮೋಹ ಸಹಜ. ಅದು

ನನಗೂ ಇರಲೇಬೇಕಲ್ಲ. ಇದು ಮಾತ್ರ ನಿಮಗೆ ಯಾಕೆ ತಿಳಿಯಲ್ಲ, ಅಪ್ಪಾಜಿ?'

ನೀವು ಮಹರ್ಷಿಗಳು. ಧೀರರು. ನಮಗೆಲ್ಲ ದಿಕ್ಕಾದವರು

ನಿಮ್ಮನ್ನು ಪ್ರಸನ್ನಗೊಳಿಸಬೇಕು, ನಿಮ್ಮ ಮಾತು ನಡೆಸಬೇಕು ಅಂತ ನನಗೂ ಆಸೆ

ಆದರೆ ಏನು ಮಾಡಲಿ, ನನ್ನ ಮಕ್ಕಳು ನನ್ನ ಕೈಲಿಲ್ಲ

ನೀನು ಇಬ್ಬರಿಗೂ ಅಜ್ಜನಾಗಬೇಕು. ಇಬ್ಬರಿಗೂ ನೀನೇ ಧರ್ಮ

ಇಂಥ ಸಮಯದಲ್ಲಿ ಸರಿಯಾದದ್ದನ್ನ ಮಾಡುವುದಕ್ಕೆ ನಿನಗೊಬ್ಬನಿಗೇ ಸಾಧ್ಯ

(ತಕ್ಷಣ ವ್ಯಾಸ ಮಾತನ್ನೇ ಬದಲಾಯಿಸಿ ಬಿಡುತ್ತಾನೆ. ನಿನ್ನ ಮನಸ್ಸಿನಲ್ಲಿ ಏನಾದರೂ ಸಂಶಯವಿದ್ದರೆ ಕೇಳುನಿವಾರಿಸುತ್ತೇನೆ ಎನ್ನುತ್ತಾನೆ. ಯುದ್ಧದಲ್ಲಿ ವಿಜಯ ಉಂಟಾಗುವುದರ ಸೂಚನೆ ಏನು ಎಂದು ನಿಮಿತ್ತ ಕೇಳುತ್ತಾನೆ ಧೃತರಾಷ್ಟ್ರ)

(ಸಶೇಷ)